ಐವರ್ನಾಡು ಕೊಯಿಲ ಪರಿಶಿಷ್ಟ ಜಾತಿ ಕಾಲೋನಿಗೆ ವಿಶೇಷ ಘಟಕ ಯೋಜನೆ

೧೩೨೦ (೨೫೯) ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸುಳ್ಯ ತಾಲ್ಲೂಕಿನ ಐವರ್ನಾಡು ಕೊಯಿಲ ಪರಿಶಿಷ್ಟ ಜಾತಿ ಕಾಲೋನಿಗೆ ವಿಶೇಷ ಘಟಕ ಯೋಜನೆಯಲ್ಲಿ ಖರ್ಚು ಮಾಡಿದ ಹಣವೆಷ್ಟು. ಇದರಲ್ಲಿ ನೀರಾವರಿಗಾಗಿ ಖರ್ಚು ಮಾಡಿದ ಹಣವೆಷ್ಟು ?

ಆ) ಈ ಕಾಲೋನಿಯಲ್ಲಿ ಹರಿಯುವ ನೀರಿನ ಆನುಕೂಲತೆ ಇದ್ದರೂ, ಅಲ್ಲಿಗೆ, ಡ್ಯಾಂ ರಚಿಸದೇ ಬೇರೆ ತೆರೆದ ಬಾವಿಯನ್ನು ತೋಡಲು ಕಾರಣವೇನು, ಇದರಲ್ಲಿ ಇಲ್ಲಿಯ ೩೧ ಕುಟುಂಬಗಳಿಗೆ ಕುಡಿಯಲು ಬೇಕಾದಷ್ಟು ನೀರು ಸಿಗದಿರುವುದು ನಿಜವೇ ?

ಇ) ಈ ಜನರಿಗೆ ಕೃಷಿ ಕಾಲೋನಿ ಆಗಿ ಜಮೀನು ಮಂಜೂರಾಗಿದ್ದು, ಇಲ್ಲಿ ಹರಿಯುವ ನೀರಿನ ಜಲವಿದ್ದರೂ, ಈ ಮಂಜೂರಾದ ಜಮೀನಿನಿಂದ ಖಾಸಗಿಯವರಿಗೆ ನೀರಿನ ಪರವಾನಗಿ ನೀಡಿದವು ನಿಜವೇ? ಈ ಪರವಾನಗಿಯನ್ನು ಖಾಸಗಿಯವರಿಗೆ ಯಾವ ವರ್ಷದಲ್ಲಿ ನೀಡಲಾಗಿದೆ ?

ಈ) ಸದರಿ ಕಾಲೋನಿ ಜನರಿಗೆ ಮಂಜೂರಾದ ಸ್ಥಳದಲ್ಲಿ ಹರಿಯುವ ನೀರಿನ ಆಶ್ರಯದಲ್ಲಿ ವೆಂಟೆಡ್ ಡ್ಯಾಂ ರಚಿಸಲು ಮತ್ತು ಖಾಸಗಿ ಮಾಲೀಕರ ಪರವಾನಗಿಯನ್ನು ರದ್ದುಪಡಿಸಲು ಸರ್ಕಾರ ದವರು ಕ್ರಮ ಕೈಗೊಳ್ಳುವರೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೪,೭೩,೪೫೬ ರೂಗಳು. ಈ ಪೈಕಿ ೧,೧೧,೧೨೧ ರೂಗಳನ್ನು ನೀರಾವರಿ ಬಾಬಿಗಾಗಿ ಖರ್ಚು ಮಾಡಲಾಗಿದೆ.

ಆ) ನೀರು ಹರಿಯುವಿಕೆಯ ಪ್ರಮಾಣವು ಸಣ್ಣ ಮಟ್ಟದಲ್ಲಿದ್ದು ಮಳೆಗಾಲದಲ್ಲಿ ಮಾತ್ರ ಇರುವುದರಿಂದ ಡ್ಯಾಂ ರಚನೆಗೆ ಸೂಕ್ತವಾಗಿರುವುದಿಲ್ಲ. ಗಂಗಾ ಕಲ್ಯಾಣ ಯೋಜನೆಯಲ್ಲಿ ತೋಡಿರುವ ಬಾವಿಯ ಕೆಳಗಿನ ಹಂತ ಕುಸಿಯುವುದರಿಂದ ಕೆಲವೊಮ್ಮೆ ಸಾಕಷ್ಟು ಕುಡಿಯುವ ನೀರು ಸಿಗದಂತಾಗಿದೆ ಹಾಗೂ ಇಂತಹ ಸಂದರ್ಭಗಳಲ್ಲಿ ಪಕ್ಕದ ಕೊಳವೆ ಬಾವಿಯಿಂದ ಕುಡಿಯುವ ನೀರನ್ನು ತರಲಾಗುತ್ತಿದೆ.

ಇ) ಈ ಕಾಲೋನಿಯಲ್ಲಿ ಯೋಜನೆಯನ್ನು ಪ್ರಾರಂಭಿಸುವ ಮೊದಲೇ ಅಂದರೆ ೧೯೮೩ಕ್ಕೆ ಮೊದಲು ಖಾಸಗಿ ಜಮೀನುದಾರರಿಗೆ ಲೋಕೋಪಯೋಗಿ ಇಲಾಖೆಯಿಂದ ನೀರಿನ ಪರವಾನಗಿ ನೀಡಲಾಗಿದೆ.

ಈ) 'ಅ' ಉಪ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ಹೇಳಿರುವ ಕಾರಣಗಳಿಗಾಗಿ ಅಣೆಕಟ್ಟು ನಿರ್ಮಾಣ ಸಾಧ್ಯವಿಲ್ಲ. ಆದ್ದರಿಂದ, ಖಾಸಗಿಯವರಿಗೆ ಈಗಾಗಲೇ ನೀಡಿರುವ ಪರವಾನಗಿಯನ್ನು ರದ್ದುಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳ ಬಗ್ಗೆ

೧೩೨೧ (೧೯೮೮) ಶ್ರೀ ಬಿ. ಶ್ವಾಮಿರಾವ್ (ಹೊಸನಗರ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹೊಸನಗರ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘದಲ್ಲಿ ಹತ್ತು ಲಕ್ಷ ರೂಪಾಯಿಗಳ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಕರ್ತರಾಗಿರುವವರ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?